ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಮೂಲತಃ ಕಾರಣರಾದ ಸನ್ಮಾನ್ಯ ನಿಜಲಿಂಗಪ್ಪನವರ ಹೆಸರನ್ನು ಇದಕ್ಕೆ ಇಡಲಿಕ್ಕೆ ಸರ್ಕಾರ ಏನಾದರೂ ತೀರ್ಮಾನ ಮಾಡಿದೆಯೇ?

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಆ ಯೋಜನೆ ಮಾಡುವುದಕ್ಕೇ ಅವರು ಅನುಮಾನ ಪಡುತ್ತಿದ್ದಾರೆ. ಎಲ್ಲಿದೆ ನೀರು ಹೇಳಿ ಅಂತ ಹೇಳುತ್ತಾರೆ? ಎಲ್ಲಿ ಎಸ್ಟಿಮೇಟ್ ಇದೆ ಅಂತ ಹೇಳುತ್ತಾರೆ? ಯೋಜನೆಗೆ ಮಾನ್ಯ ನಿಜಲಿಂಗಪ್ಪನವರು ಹೆಸರು ಇಡುತ್ತೀರಾ? ಎಂದು ಕೇಳುತ್ತಿದ್ದಾರೆ. ಈ ಯೋಜನೆಗೆ ಮಾನ್ಯ ನಿಜಲಿಂಗಪ್ಪನವರ ಹೆಸರನ್ನು ಇಡಲೇಬೇಕೆಂಬುದು ನಮ್ಮ ಆಸೆ. ನಾವು ಆ ಹೆಸರು ಇಡುತ್ತೇವೆ. Kindly cooperate with us.

ಅಧ್ಯಕ್ಷರು:- ಅರ್ಧ ಗಂಟೆ ಕಾಲಾವಧಿಯಡಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಯೋಜನೆಗೆ ಯಾರ ಹೆಸರನ್ನಾದರೂ ಇಟ್ಟುಕೊಳ್ಳಲಿ. ಇನ್ನಾವುದಾದರೂ ಒಂದು ಯೋಜನೆಗೆ ಮಾನ್ಯ ಸದಸ್ಯರ ಹೆಸರನ್ನೂ ಇಟ್ಟುಬಿಡಿ. ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು.

2 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಬಾಯಿ ಮಾತಿನ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಿ.ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 23ನೇ ಜುಲೈ 1996 13ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 86 ಪ್ರಶ್ನೆಗಳ ಪೈಕಿ 70 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 153 (963)

ಶ್ರೀ ಯು.ಬಿ.ಬಣಕಾರ್ (ಹಿರೇಕೋರ್):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳು ಎಷ್ಟು? ಅವು ಯಾವುವು?

ಆ) 1993-94ನೇ ಸಾಲಿನಿಂದ ಪ್ರತಿ ವರ್ಷ ಅವುಗಳು ಉತ್ಪಾದನಾ ಸಾಮರ್ಥ್ಯದ ಗುರಿ ಎಷ್ಟು ಹಾಗೂ ಉತ್ಪಾದನೆ ಆದ ವಿದ್ಯುತ್ ಪ್ರಮಾಣ ಎಷ್ಟು?

ಶ್ರೀ ಶರಣ ಬಸಪ್ಪ ದಾರ್‌ಸನಪುರ್ (ಇಂಧನ ರಾಜ್ಯ ಸಚಿವರು):-

ಅ) ರಾಜ್ಯದಲ್ಲಿ ವಿದ್ಯುತ್ ನಿಗಮ ಹಾಗೂ ವಿದ್ಯುತ್ ಮಂಡಳಿಯ ವಿದ್ಯುದಾಗಾರಗಳು ಸೇರಿ ಒಟ್ಟಾರೆ 22 ವಿದ್ಯುತ್ ಉತ್ಪಾದನಾ ಕೇಂದ್ರಗಳಿವೆ. ಅವು ಯಾವುವೆಂದರೆ :

1) ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವಿದ್ಯುತ್ ಉತ್ಪಾದನಾ ಕೇಂದ್ರಗಳು:

1. ಶರಾವತಿ ವಿದ್ಯುದಾಗಾರ
2. ಲಿಂಗನಮಕ್ಕಿ ವಿದ್ಯುದಾಗಾರ
3. ಭದ್ರಾ ವಿದ್ಯುದಾಗಾರ
4. ನಾಗಝರಿ ವಿದ್ಯುದಾಗಾರ
5. ಸೂಪ ವಿದ್ಯುದಾಗಾರ
6 ವರಾಹಿ ಭೂಗರ್ಭ ವಿದ್ಯುದಾಗಾರ
7. ಮಾಣಿ ವಿದ್ಯುದಾಗಾರ
8. ಘಟಪ್ರಭ ವಿದ್ಯುದಾಗಾರ
10. ಮಲ್ಲಾಪುರ ವಿದ್ಯುದಾಗಾರ
11. ಸಿರವಾರ ಕಿರು ವಿದ್ಯುದಾಗಾರ
12. ಗಾಣೀಕಲ್ ಕಿರು ವಿದ್ಯುದಾಗಾರ
13. ಕೆರಗೋಡು ಕಿರು ವಿದ್ಯುದಾಗಾರ
14. ರಾಯಚೂರು ಶಾಖೋತ್ಪನ್ನ ಕೇಂದ್ರ
15. ಕಪ್ಪದಗುಡ್ಡ ಪವನ್ ವಿದ್ಯುತ್ ಕೇಂದ್ರ

2) ಕರ್ನಾಟಕ ವಿದ್ಯುತ್ ಮಂಡಳಿಯ ವಿದ್ಯುತ್ ಉತ್ಪಾದನಾ ಕೇಂದ್ರಗಳು:

1. ಶಿವಸಮುದ್ರಂ ವಿದ್ಯುದಾಗಾರ
2. ಶಿಂಷಾ ವಿದ್ಯುದಾಗಾರ
3. ಮಹಾತ್ಮ ಗಾಂಧಿ ವಿದ್ಯುದಾಗಾರ
4. ತುಂಗಭದ್ರಾ ವಿದ್ಯುದಾಗಾರ
5. ಮುನಿರಾಬಾದ್ ವಿದ್ಯುದಾಗಾರ
6. ಯಲಹಂಕ ಡೀಸೆಲ್ ವಿದ್ಯುದಾಗಾರ

3) ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರ

1. ಶಿವಪುರ ವಿದ್ಯುದಾಗಾರ

ಅ) ವಿದ್ಯುತ್ ಕೇಂದ್ರಗಳಲ್ಲಿ 1993-94ನೇ ಸಾಲಿನಿಂದ ಪ್ರತಿವರ್ಷ ಅವುಗಳ ಉತ್ಪಾದನಾ ಸಾಮರ್ಥ್ಯದ ಗುರಿ ಹಾಗೂ ಉತ್ಪಾದನೆ ಕೆಳಕಂಡಂತೆ ಇದೆ:

ವರ್ಷಗಳು	ಉತ್ಪಾದನಾ ಗುರಿ (ದಶಲಕ್ಷ ಯೂನಿಟ್‌ಗಳು)	ಉತ್ಪಾದನೆ
1993-94	19862	14278
1994-95	14056	16327
1995-96	15777	15446

ವಿಷಯ:- ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1020

ಶ್ರೀ ಎನ್.ರಾಜಣ್ಣ:- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಎಲ್ಲಾ ವರ್ಗಗಳು ಸೇರಿದಂತೆ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):-

ಅ) 13,013.

ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ರಾಜ್ಯದ ವಿದ್ಯುತ್ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 673 (1470)

ಶ್ರೀ ಕುಂಬ್ಳೆ ಸುಂದರರಾವ್:- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿದ್ಯುತ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು?